

# ನೀರಿನೊಳಗಿನ ಮಂಜು

■ ಡಾ. ನಾ. ಮೊಗಸಾಲೆ
ಕಲೆ: ಮನೋಹರ ಕೆ. ಆಚಾರ್ಯ

## ಜಾತಿಬಂಡೆ ಸೀಳಿ ಹೊರಬಂದ ಪ್ರೇಮದ ಚಿಗುರು

ಶೆಟ್ಟರು ಖುಶಿಯಲ್ಲಿ 'ಅದು ಸ್ಥಳನಾಮ ಅಲ್ಲ ಸರ್. ನಮ್ಮಜ್ಜ ಅಂದರೆ ನನ್ನ ತಂದೆಯ ತಂದೆ ಇಡೀ ಕುಂದಾಪುರಕ್ಕೇ ದೊಡ್ಡದೆನ್ನುವಂಥ ಬಂಡಸಾಲೆ ಅಂದರೆ ದಿನಸಿ ಅಂಗಡಿ ಮಾಲಕರಾಗಿದ್ದರಂತೆ. ರಖಂಗಟ್ಟಲೆ ಅಕ್ಕಿ, ಬೆಲ್ಲ, ಸಕ್ಕರೆ ಎಲ್ಲಾ ತರಿಸಿ ಬೇರೆ ಬೇರೆ ಊರುಗಳಿಗೆ ಪೂರೈಸುತ್ತಿದ್ದರಂತೆ. ಹಾಗಾಗಿ ಬಂಡಸಾಲೆ ಇಟ್ಟವರು ಎಂದು ಬಂಡಸಾಲೆಯ ರಾಮಣ್ಣ ಎಂಬ ಹೆಸರು ನಮ್ಮಜ್ಜನಿಗೆ ಬಂತು. ಅವರ ಕಾಲದಲ್ಲಿ ಚೆನ್ನಾಗಿ ವ್ಯವಹಾರ ನಡೆದದ್ದರಿಂದ ಅವರು ಸಾಕಷ್ಟು ಆಸ್ತಿಪಾಸ್ತಿ ಮಾಡಿದ್ದರು ಎನ್ನುತ್ತಾರೆ. ಅವರು ಮಾಡಿದ ಆಸ್ತಿಪಾಸ್ತಿ ಕುಂದಾಪುರ ತಾಲೂಕಿನಲ್ಲಷ್ಟೇ ಅಲ್ಲ, ಕಾರ್ಕಳ ತಾಲ್ಲೂಕಿನಲ್ಲೂ ಇದೆ ಎಂದು ನಮ್ಮ ಮಾವಂದಿರು ಹೇಳುತ್ತಿದ್ದುದುಂಟು. ಅಜ್ಜ ಸತ್ತ ನಂತರ ಆ ಬಂಡಸಾಲೆಯ ವೈಭವ ನಮ್ಮ ಹಿರಿಯರ ದರ್ಬಾರಿನಿಂದ ಕಡಿಮೆಯಾಯಿತು. ದೂರದ ಊರುಗಳಲ್ಲಿರುವ ಕೆಲವು ಜಮೀನನ್ನು ನಮ್ಮ ಹಿರಿಯರು ಮಾರಿಯೂ ಬಿಟ್ಟರು. ಈಗಲೂ ಮೂಲ ಬಂಡಸಾಲೆ ಮನೆಯ ಶ್ರೀಮಂತಿಕೆಗೆ ಏನೂ ಕೊರತೆ ಇಲ್ಲ. ನಮ್ಮ ಕುಟುಂಬ ವ್ಯವಸ್ಥೆಯು ಮಾತೃಪ್ರಧಾನವಾಗಿದ್ದು ಅದರಲ್ಲಿ ಗಂಡಿಗೆ ಆಸ್ತಿಯ ಹಕ್ಕಿಲ್ಲ. ಅಜ್ಜ ಮಾಡಿದ ಆಸ್ತಿಪಾಸ್ತಿಯೆಲ್ಲ ಅವರ ಮಕ್ಕಳಿಗಲ್ಲ, ಅವರ ಸಹೋದರಿಯರಿಗೆ ಮತ್ತು ಆ ಸಹೋದರಿಯರ ಮಕ್ಕಳಿಗೆ ಸಲ್ಲಬೇಕು ಎಂಬ ನಿಯಮ ಇದ್ದುದರಿಂದ ಅದರಲ್ಲಿ ನನಗೇನೂ ಹಕ್ಕಿರಲಿಲ್ಲ. ಆದರೆ ನನ್ನ ತಾಯಿಯ ಕಡೆಯಿಂದ ಬಂದ ಜಮೀನಿನಲ್ಲಿ ನಾನು ಸ್ವಲ್ಪ ಕೃಷಿ ಮಾಡಿ ಆ ಉತ್ಪತ್ತಿಗೆ ಈ ವ್ಯವಹಾರವೂ ಪೂರಕವಾಗಲಿ ಎಂದು ಸಣ್ಣ ಬಂಡಸಾಲೆ ಮಾಡಿದೆ. ಅದಕ್ಕೆ ಅಜ್ಜನ ಹೆಸರಿನ ನಂಟು ಇರುವುದರಿಂದ ವ್ಯಾಪಾರದಲ್ಲಿ ಪ್ರಯೋಜನ ಆಗದಿದ್ದರೂ ಗೌರವದಲ್ಲಿ ಸ್ವಲ್ಪ ಮಟ್ಟಿಗೆ ಇದೆ ಎನ್ನುವುದು ನನ್ನ ಅನುಭವ' ಎಂದರು.

ನಾನು ನಕ್ಕೆ. 'ನನ್ನ ಹೆಸರಿನ ಹಿಂದೆ ಕೊಪ್ಪರಿಗೆ ಅಂತ ಇದೆ ಶೆಟ್ಟರೇ. ಅದೂ ಹೀಗೇ ಕೊಪ್ಪರಿಗೆಗಟ್ಟಲೆ ಶ್ರೀಮಂತಿಕೆ ಉಳ್ಳ ಅಥವಾ ಇದ್ದ ಮನೆತನ ಅಂತ ಅರ್ಥ ಅಲ್ಲ. ಈ ಉದ್ಯೋಗ ಬಿಟ್ಟರೆ ನನಗೆ ಬೇರೇನೂ ಇಲ್ಲ' ಎಂದು ಹೇಳಿದೆ. ಆಮೇಲೆ ಅವರಿಗೆ 'ನಿಧಾನವಾಗಿ ನಾನು ಕೊಪ್ಪರಿಗೆ ಎನ್ನುವ ಊರ ಹೆಸರನ್ನು ಕೈಬಿಟ್ಟು ಕೇವಲ 'ಕೆ' ಎನ್ನುವ ಇನ್ಶಿಯಲ್ ಮಾತ್ರ ಇಟ್ಟುಕೊಳ್ಳಲು ಯೋಚಿಸುತ್ತಿದ್ದೇನೆ' ಎಂದೆ.

ಶೆಟ್ಟರು ಅದಕ್ಕೆ ಪ್ರತಿಕ್ರಿಯೆ ಕೊಡಲಿಲ್ಲ.

ನಾನು ಅಲ್ಲಿಂದ ಹೊರಡುವಾಗ 'ಬರುವ ಸೋಮವಾರದಿಂದ ಟ್ಯೂಶನ್ ಕ್ಲಾಸ್ ಪ್ರಾರಂಭ ಮಾಡುತ್ತೇನೆ. ರೂಮಿನ ವ್ಯವಸ್ಥೆ ಪ್ರತ್ಯೇಕ ಇದೆಯಾ? ಅಥವಾ ಈ ಚಾವಡಿಯಲ್ಲೇ ನಡೆಸಲೇ? ನಿಮ್ಮ ಅನುಕೂಲವೇ ನನ್ನ ಅನುಕೂಲ' ಎಂದೆ.

ಶೆಟ್ಟರು 'ಪ್ರತ್ಯೇಕ ರೂಮಿನ ವ್ಯವಸ್ಥೆ ಇದೆ ಸರ್. ಗಾಳಿ ಬೆಳಕು ಫ್ಯಾನು ಕರೆಂಟು ಎಲ್ಲ ಇದೆ. ಚಾವಡಿಯಲ್ಲಾದರೆ ಈ ಪೇಟೆಯ ವಾಹನಗಳ ಗೌಜಿ ಗದ್ದಲ ಎಲ್ಲ ಕೇಳಿಸುತ್ತಲೇ ಇರುತ್ತದೆ. ಅದಕ್ಕಿಂತ ರೂಮೇ ಉತ್ತಮ ಎಂದು ನನ್ನ ಅಭಿಪ್ರಾಯ' ಎಂದರು.

'ಓ.ಕೆ., ಎಲ್ಲಿ ತೋರಿಸಿ ನೋಡೋಣ' ಎಂದೆ.

ಶೆಟ್ಟರು ಮನೆಯ ಹಿಂಬದಿಯಲ್ಲಿರುವ ರೂಮಿನ ಕಡೆ ನನ್ನನ್ನು ಕರೆದುಕೊಂಡು ಹೋದರು. 'ಹೇಗಿದೆ ನೋಡಿ?' ಎಂದು ಪ್ರಶ್ನಿಸಿದರು. ನಾನು ಒಮ್ಮೆ ರೂಮನ್ನು ಅವಲೋಕಿಸಿ 'ಗುಡ್, ಚೆನ್ನಾಗಿದೆ. ಒಂದು ಮೇಜು ಎರಡು ಕುರ್ಚಿ ಬೇಕು. ಪರಸ್ಪರ ಇದಿರು ಬದಿರಾಗಿ ನಾವು ಕುಳಿತುಕೊಳ್ಳುವವರು' ಎಂದೆ.

ಶೆಟ್ಟರು 'ಸರಿ' ಎಂದರು. ಅದೇ ಮುಂದಿನ ಸೋಮವಾರ ಎಲ್ಲವನ್ನೂ ಸಿದ್ಧಪಡಿಸಿ ಸಂಜೆ ಐದೂವರೆಗೆ ನನ್ನನ್ನು ಸ್ವಾಗತಿಸಲು ಶೆಟ್ಟರು ಚಾವಡಿಯಲ್ಲಿ ಕಾದು ಕುಳಿತರು.

ನಾನು ಹೋಗುತ್ತಿದ್ದಂತೆ ಶೆಟ್ಟರ ಧರ್ಮಪತ್ನಿ ವೆಂಕಮ್ಮ ನೀಡಲು ಮುಂದಾದ ಕಾಫಿಯನ್ನು ನಿರಾಕರಿಸಿದೆ. ನೇರವಾಗಿ ಟ್ಯೂಶನ್ ಪ್ರಾರಂಭಿಸಿದೆ. ಸರೋಜ 'ಅದು ಹೇಗೆ ಸರ್?' ಇದು ಹೀಗೆ ಅಲ್ವಾ ಸರ್?' ಎಂದು ಪ್ರಶ್ನಿಸಲು ಮುಂದಾದಳು. ನಾನು 'ಮೊದಲು ಹೇಳುವುದನ್ನೆಲ್ಲ ಹೇಳುತ್ತೇನೆ. ಕೊನೆಗೆ ಅರ್ಥವಾಗದ್ದನ್ನೆಲ್ಲ ಕೇಳು. ನಡುನಡುವೆ ನೀನು ಪ್ರಶ್ನೆ ಹಾಕಿದರೆ ನನ್ನಲ್ಲಿ ಉತ್ಸಾಹ ಇರುವುದಿಲ್ಲ!' ಎಂದೆ. ಸರೋಜ 'ಸರಿ' ಎಂದು ಒಪ್ಪಿದಳು.

ಒಂದು ತಿಂಗಳು ಸರೋಜಾಳ ಟ್ಯೂಶನ್ ಕ್ಲಾಸ್ ತೀರಾ ಗಂಭೀರವಾಗಿ ನಡೆಯಿತು. ಇದರ ನಡುವೆ ನನ್ನ ಬಗ್ಗೆ ಆಕೆಯಲ್ಲಿ ಇದ್ದ ಗೌರವ ನಿಧಾನವಾಗಿ